ಶ್ರಾವಣ ಮಾಸವನ್ನು 'ಕಾವ್ಯ ಮಾಸ'ವನ್ನಾಗಿ ಆಚರಿಸುವ ಕಾವ್ಯಾಸಕ್ತರಿದ್ದಾರೆ. ಮನೆಮನೆಗಳಲ್ಲಿ ಕವಿಗೋಷ್ಠಿ ಕಾರ್ಯಕ್ರಮಗಳು ನಡೆಯುತ್ತವೆ. ಅಂತೆಯೇ, 'ವಚನ ಶ್ರಾವಣ' ಹೆಸರಿನಲ್ಲಿ ಶರಣರ ವಚನಗಳನ್ನು ಅರ್ಥೈಸುವ ಕಾರ್ಯಕ್ರಮಗಳಿಗೂ ಶ್ರಾವಣ ವೇದಿಕೆಯಾಗಿದೆ.

## ಹಬ್ಬಗಳಿಗೆ ಮುನ್ನುಡಿ

ಸಂಸ್ಕೃತಿ–ಸಾಹಿತ್ಯದ ಮಾತಿನಿಂದ ಸಮಾಜದತ್ತ ಬನ್ನಿ. ಅಲ್ಲಿ ದೀಪಸಾಲಿನಂತೆ ಹಬ್ಬಗಳ ಸರತಿ ಕಾಣಿಸುತ್ತದೆ. ಶುಭ ಕೆಲಸಗಳಿಗೆ ಆಷಾಢ ಅಷ್ಟೇನೂ ಹಿತಕರವಲ್ಲ ಎನ್ನುವುದು ಜನಮನದ ನಂಬಿಕೆ. ಆ ನಂಬಿಕೆಯ ಕಾರಣದಿಂದಲೇ ಆಷಾಢದ ಬೆನ್ನಿಗೆ ಬರುವ ಶ್ರಾವಣದಲ್ಲಿ ಹಬ್ಬ–ಹರಿದಿನ, ಆಚರಣೆಗಳು ಸಾಲುಗಟ್ಟುತ್ತವೆ. ಹರಿ–ಹರ ಇಬ್ಬರಿಗೂ ಈ ಸಮಯದಲ್ಲಿ ವಿಶೇಷ ಆರಾಧನೆ. ಮಂಗಳಗೌರಿಗೂ ಪೂಜೆ, ವರ ಮಹಾಲಕ್ಷ್ಮಿಗೂ ನೈವೇದ್ಯ. ಶನಿವಾರ ತಿರುಪತಿ ತಿಮ್ಮಪ್ಪನ ಸ್ಮರಣೆಯ 'ಗೋವಿಂದ ಗೋವಿಂದ' ಅನುರಣನ.

ಪುರಾಣ ಪುಣ್ಯಕಥೆಗಳನ್ನು ಕೇಳಲಿಕ್ಕೂ ಶ್ರಾವಣ ಪ್ರಶಸ್ತ ಸಮಯ. ಹೇಳಿಕೇಳಿ, ಶ್ರಾವಣ ಎನ್ನುವ ಹೆಸರಿನ ವ್ಯುತ್ಪತ್ತಿಯಲ್ಲೇ ಇದೆ ಶ್ರವಣ. ಹಾಗೆಂದರೆ 'ಕೇಳುವುದು' ಎಂದರ್ಥ. ಶ್ರವಣದಿಂದ ಶ್ರಾವಣ. ನಮ್ಮ ಪೂರ್ವಸೂರಿಗಳ ಪಾಲಿಗೆ ಶ್ರವಣವೆಂದರೆ ಏನು? ಅದು ದೇವದೇವತೆಯರ ಲೀಲಾವಿನೋದ ಪ್ರಸಂಗಗಳು, ಸಾಧುಸಂತರ ಕಥೆಗಳು – ಇವುಗಳನ್ನೊಳಗೊಂಡ ಪುರಾಣ ಕಾವ್ಯಗಳನ್ನು ಕೇಳುವುದೇ ಆಗಿದೆ. ಹೀಗೆ ಕೇಳುವುದರ ಹಿಂದೆ ಲೌಕಿಕ ಬದುಕಿನ ಉನ್ನತಿಯ ಅಪೇಕ್ಷೆಯಿದೆ, ಪಾರಲೌಕಿಕ ಬದುಕಿನ ಸದ್ಗತಿಯ ಹಂಬಲವೂ ಇದೆ. ಈ ಉನ್ನತಿ–ಸದ್ಗತಿಗಳ ಬಯಕೆಗೆ ಪುರಾಣ ವಾಚನ–ಶ್ರವಣಗಳು ಸೋಪಾನವಾಗಿ ಒದಗಿಬರುತ್ತವೆ.

ಶ್ರಾವಣಮಾಸದಲ್ಲಿನ ಹಬ್ಬಗಳ ವೈವಿಧ್ಯವೂ ಗಮನಸೆಳೆಯುವಂತಹದ್ದು. 'ನಾಡಿಗೆ ದೊಡ್ಡದು ನಾಗರಪಂಚಮಿ' ಎನ್ನುವ ವಿಶೇಷಣದ 'ನಾಗರ ಪಂಚಮಿ' ಹಬ್ಬ ಶ್ರಾವಣ ಸಂಭ್ರಮಕ್ಕೆ ಮುನ್ನುಡಿ ಬರೆಯುವಂತಹದ್ದು. 'ಪಂಚಮಿ ಹಬ್ಬಕ ಉಳಿದಾವ ದಿನ ನಾಕ / ಅಣ್ಣ ಬರಲಿಲ್ಲ ಯಾಕ ಕರಿಯಾಕ' ಎನ್ನುವ ನಮ್ಮ ಜಾನಪದ



ಚಿತ್ರ: ದಿನೇಶ್ ಮಾನೀರ್

### ತೆರೆವುದು ಕಥನದ ಬಾಗಿಲು

–ಲಕ್ಷ್ಮಣದಾಸ್, ಕಥಾ ಕೀರ್ತನೆಕಾರ

ಕಥಾ ಕೀರ್ತನಕಾರನಿಗೆ ಶ್ರಾವಣ ಭಾಗ್ಯದ ಬಾಗಿಲು ಎಂದರೆ ತಪ್ಪಲ್ಲ. ಕೀರ್ತನಕಾರನಿಗೆ ಹೆಚ್ಚು ಕಾರ್ಯಕ್ರಮ ಆರಂಭವಾಗುವುದೇ ಶ್ರಾವಣದಲ್ಲಿ.

ಕಥಾ ಕೀರ್ತನ ಪರಂಪರೆಯ ಹಾದಿಯಲ್ಲಿ ಶ್ರಾವಣಕ್ಕೆ ಬಹುಮುಖ್ಯ ಸ್ಥಾನ ಇದೆ. ಶ್ರಾವಣ ಸೋಮವಾರದಿಂದ ಶನಿವಾರದವರೆಗೂ ಕಾರ್ಯಕ್ರಮಗಳ ಸುಗ್ಗಿ. ಪ್ರತಿ ರಾತ್ರಿ ಕಥಾ ಕೀರ್ತನೆ ನಡೆಯುತ್ತದೆ. ಈಗ ವಿದ್ಯುನ್ಮಾನ ಕಾಲದಲ್ಲಿ ಕಥಾ ಕೀರ್ತನೆ ಕಡಿಮೆ ಆಗಿದೆ ನಿಜ, ಆದರೆ ಶ್ರಾವಣ ಮಾಸ ಮಾತ್ರ ಕಥಾ ಕೀರ್ತನೆಗೆ ಅಕ್ಷಯ ನಿಧಿ. ಆಷಾಢ ಮಾಸದಲ್ಲಿ ಕಾರ್ಯಕ್ರಮ ಇಲ್ಲದಿದ್ದವರಿಗೆ ಶ್ರಾವಣದಲ್ಲಿ ನಿರಂತರ ಕಛೇರಿಗಳು.



ನಾನು ಕಥಾ ಕೀರ್ತನೆಗೆ ಪ್ರವೇಶಿಸಿದ ಶ್ರಾವಣ ಕಾಲದಲ್ಲಿ ಒಂದು ಗಳಿಗೆಯೂ ಬಿಡುವು ಇಲ್ಲದೆ ಕಾರ್ಯಕ್ರಮ ನೀಡಿದ್ದೇನೆ. ವಿಷ್ಣು ಕಥೆ, ಶನಿ ದೇವರ ಕಥೆಗಳು ಈ ಸಮಯದಲ್ಲಿ ಹೆಚ್ಚು. ನವಗ್ರಹಗಳಲ್ಲಿ ಪ್ರಮುಖನಾದ ಶನಿಯ ಆರಾಧನೆಗೆ ಶ್ರಾವಣ ಶನಿವಾರ ಪ್ರಮುಖವಾದುದು. ಆದ್ದರಿಂದ ಶನಿಗೆ ಸಂಬಂಧಿಸಿದ ಕಥೆಗಳನ್ನು ಹೇಳಿಸಿದರೆ ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆ ಭಕ್ತರಲ್ಲಿ ಇದೆ.

ಶ್ರಾವಣ ಸೋಮವಾರ ಶಿವನಿಗೆ ಸಂಬಂಧಿಸಿದ ಕಥೆಗಳನ್ನು ಪಾರಾಯಣ ಮಾಡಲಾಗುತ್ತದೆ. ಶ್ರಾವಣ ಮಾಸ ಗ್ರಾಮೀಣ ಭಾಗದ ಜನರಲ್ಲಿ ಮಹತ್ವವಾದುದು. ಎಲ್ಲ ದೇವಾಲಯಗಳಲ್ಲಿ ಭಕ್ತರು ತುಂಬಿ ತುಳುಕಿರುತ್ತಾರೆ.


